**ದಿನಾಂಕ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4 ರಿಂದ 7 ನೇ ಪ್ರತಿವಾದಿಗಳ ಪರ: ಶ್ರೀ. ಎಂ.ಎಸ್,ಹೆಚ್. ವಕೀಲರಿಂದಃ–**

ನನಗೆ ವಿಭಾಗ ಎಂದರೇನು ಎಂದು ಗೊತ್ತು. ಒಟ್ಟು ಕುಟುಂಬದ ಸದಸ್ಯರು ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳುವುದನ್ನು ವಿಭಾಗ ಎನ್ನುತ್ತಾರೆ ಎಂದರೆ ಸರಿ. ನಿಪಿ.1 ರ ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಗೆ ವಿಭಜನೆಯ ಮೂಲಕ ಬಂದಂತಹ ಆಸ್ತಿಯಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಾತ ತೀರಿಹೋಗಿದ್ದರಿಂದ ನನ್ನ ದೊಡ್ಡಪ್ಪನ ಹೆಸರಿಗೆ ಬಂದಿದ್ದು ಪಹಣಿಯಲ್ಲಿ ಆ ರೀತಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ವಾದಪತ್ರದಲ್ಲಾಗಲಿ, ನನ್ನ ಪ್ರಮಾಣಪತ್ರದಲ್ಲಾಗಲಿ ನಾನು ಪೊಲೀಸ್ ವೃತ್ತಿಯನ್ನು ಮಾಡುತ್ತಿದ್ದೇನೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸ್ ವೃತ್ತಿಯಲ್ಲಿ ಇದ್ದರೂ ಸಹ ಅದನ್ನು ನನ್ನ ವಾದಪತ್ರದಲ್ಲಿ ಮತ್ತು ನನ್ನ ಪ್ರಮಾಣಪತ್ರದಲ್ಲಿ ಏಕೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದು ಅವಶ್ಯಕತೆ ಇರಲಿಲ್ಲ ಅದಕ್ಕಾಗಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಮುಂದೆ ವ್ಯವಸಾಯಗಾರನೆಂದು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ಸರ್ವೆ ನಂ.37 ರಲ್ಲಿ ನ್ಯಾಯಾಲಯದ ಆದೇಶದಂತೆ 2019 ರಿಂದ ಈಚೆಗೆ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ. ಈ ದಾವೆಯಲ್ಲಿ ಮಧ್ಯಂತರ ಅರ್ಜಿ ಸಂ.1 ರ ಆದೇಶದ ಮೇರೆಗೆ ಮೇಲ್ಮನವಿಯನ್ನು ನನ್ನ ತಂದೆಯವರು ಸಲ್ಲಿಸಿರುವುದಿಲ್ಲ ಏಕೆಂದರೆ ನನ್ನ ತಂದೆಯು ಅನಾರೋಗ್ಯದಿಂದ ಬಳಲುತ್ತಿದ್ದರು. ನಾನೂ ಸಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿಂದ ಬಂದು ಮಧ್ಯಂತರ ಅರ್ಜಿ ಸಂ.1 ರ ಆದೇಶದ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ.3 ರ ಕ್ರಯ ಪತ್ರದಂತೆ 5 ರಿಂದ 7 ನೇ ಪ್ರತಿವಾದಿಗಳಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ಖಾತೆಯಾಗದಂತೆ ತಡೆಯಲು ಅರ್ಜಿ ನೀಡಿರುತ್ತೇವೆ ಎಂದು

ನುಡಿಯುತ್ತಾರೆ. ಸದರಿ ಖಾತೆಯನ್ನು 5 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ ಮಾಡಿದ ನಂತರ ಸದರಿ ಖಾತೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯಕ್ಕೆ ಬಂದು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.3 ರಂತೆ ದಾವಾ ಐಟಂ ನಂ.1 ರ ಖಾತೆಯನ್ನು 5 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ರದ್ದುಪಡಿಸಲು ಪರಿಹಾರವನ್ನು ಕೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಖಾತೆಯಾಗದಂತೆ ತಡೆ ಹಿಡಿದಿರುತ್ತೇವೆ ಮತ್ತು ಈ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ತಹಶಿಲ್ದಾರರವರ ಕಛೇರಿಯಲ್ಲಿ ತಡೆಹಿಡಿಯಲಾಗಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನಿಪಿ.4 ರ ಪಹಣಿಯಲ್ಲಿರುವ ಗೌರಮ್ಮನವರು ನನ್ನ ಅಜ್ಜಿಯವರಾಗಬೇಕು. ಸದರಿ ನನ್ನ ಅಜ್ಜಿಯವರು 1996 ರಲ್ಲಿಯೇ ಮರಣ ಹೊಂದಿರುತ್ತಾರೆ. ನನ್ನ ಅಜ್ಜಿಯ ಹೆಸರಿನಲ್ಲಿ ಖಾತೆ ಇದ್ದು, ಸದರಿ ಖಾತೆಯು ನಮ್ಮ ಹೆಸರಿಗೆ ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.2 ನ್ನು ನಿಪಿ.5 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ವಿಭಾಗದ ಮೂಲಕ ಬಂದಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜನವರು ಮರಣ ಹೊಂದಿದ್ದರಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯು ಆ ರೀತಿ ವರ್ಗಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. 2004–2005 ರ ಸಾಲಿನಲ್ಲಿ ವಿಭಾಗವಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ.5 ರ ಪಹಣಿಯ 2 ನೇ ಪುಟದಲ್ಲಿ 12 ನೇ ಕಾಲಂನಲ್ಲಿ 1 ನೇ ಪ್ರತಿವಾದಿಯು ವ್ಯವಸಾಯಗಾರರು ಮತ್ತು ಸ್ವಾಧೀನದಾರರು ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ.

ನಿಪಿ.6 ರ ಪಹಣಿಯನ್ನು ನಾನು ಏಕೆ ಹಾಜರುಪಡಿಸಿರುತ್ತೇನೆ ಎಂದರೆ ಸರ್ವೆ ನಂ.90 ರಲ್ಲಿ ನನ್ನ ತಾತ ಮೂಡ್ಲಪ್ಪನವರಿಗೆ 3 ಎಕರೆ 27 ಗುಂಟೆ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ. ಆದ್ದರಿಂದ ನಾನು ಸದರಿ ಪಹಣಿಯನ್ನು ಹಾಜರುಪಡಿಸಿರುತ್ತೇನೆ

ಎಂದು ನುಡಿಯುತ್ತಾರೆ. ನನ್ನ ತಾತನವರಿಗೆ ಸರ್ವೆ ನಂ .90 ರಲ್ಲಿ 3 ಎಕರೆ 27 ಗುಂಟೆ ಮಂಜೂರಾದ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ ಮತ್ತು ತಾಲ್ಲೂಕು ಕಛೇರಿಯಲ್ಲಿಯೂ ಸದರಿ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3 ರ ಆಸ್ತಿಯು ನನ್ನ ತಾತನಿಗೆ ಮಂಜೂರಾದ ಬಗ್ಗೆ ತೋರಿಸಲು ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಎಂದರೆ ಪಹಣಿಯಾಗಿರುತ್ತದೆ.

ನಮ್ಮ ಚೌಳಹಿರಿಯೂರು ಗ್ರಾಮದಲ್ಲಿ ನನಗೂ ಮತ್ತು 1 ನೇ ಪ್ರತಿವಾದಿಗೂ ಪ್ರತ್ಯೇಕ-ಪ್ರತ್ಯೇಕ ಮನೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ವಾಸವಿರುವ ಮನೆಯಲ್ಲಿಯೂ ನಮಗೆ ಭಾಗ ಬರಬೇಕು ಎಂದು ನುಡಿಯುತ್ತಾರೆ. ನಾವು ವಾಸವಿರುವ ಮನೆಯಲ್ಲಿ 1 ನೇ ಪ್ರತಿವಾದಿಗೆ ಹಿಸ್ಸೆಯ ಹಕ್ಕಿರುವುದಿಲ್ಲ. ಸಾಕ್ಷಿಯು ಏಕೆಂದರೆ ಅದು ನನ್ನ ತಂದೆಯವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಕುಟುಂಬಕ್ಕೆ ನನ್ನ ತಂದೆ ಮುಖ್ಯಸ್ಥರಾಗಿರುತ್ತಾರೆ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಮುಖ್ಯಸ್ಥರು ಯಾರು ಎಂದು ನನಗೆ ಗೊತ್ತಿಲ್ಲ.

ನಿಪಿ.8 ರ ಕೈಬರಹದ ಪಹಣಿ ಪತ್ರಿಕೆಯಲ್ಲಿ ನಾಗಪ್ಪ ಬಿನ್ ಮೂಡ್ಲಪ್ಪ ಎನ್ನುವವರು ನನ್ನ ಮುತ್ತಜ್ಜನಾದ ಯಾಗಪ್ಪನವರ ಅಣ್ಣ-ತಮ್ಮಂದಿರು ಮತ್ತು ಮಕ್ಕಳಾಗಿರುತ್ತಾರೆ. ನಿಪಿ.8 ರ ಪಹಣಿಯಲ್ಲಿ ನಮೂದಾಗಿರುವ ನಾಗಪ್ಪ ಬಿನ್ ಮೂಡ್ಲಪ್ಪ ನನ್ನ ತಂದೆಯವಾಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.8 ರ ದಾಖಲೆಯಲ್ಲಿ ಐಎನ್.ಹೆಚ್.7/83-84 ರಂತೆ ನಾಗಪ್ಪ ಬಿನ್ ಸಿದ್ದಪ್ಪನವರಿಗೆ 2 ಎಕರೆ 9 ಗುಂಟೆ, ಅದೇ ರೀತಿ ನಂಜುಂಡಪ್ಪ ಬಿನ್ ಮೂಡ್ಲಪ್ಪನವರಿಗೆ 2 ಎಕರೆ 6 ಗುಂಟೆ ಹಿಸ್ಸೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಮೂಡ್ಲಪ್ಪನವರು ಮರಣ ಹೊಂದಿದ್ದು ನನ್ನ ದೊಡ್ಡಪ್ಪನವರಾದ ನಂಜುಂಡಪ್ಪನವರಿಗೆ ಖಾತೆ ಕೂತು ಆ ರೀತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ನಾಗಪ್ಪ ಮತ್ತು ನನ್ನ ದೊಡ್ಡಪ್ಪನವರಾದ 1 ನೇ ಪ್ರತಿವಾದಿಯಾದ ನಂಜುಂಡಪ್ಪನವರು ಐಎನ್.ಹೆಚ್.7/83-84 ರಂತೆ ವಿಭಾಗ ಮಾಡಿಕೊಂಡಿದ್ದು ಅದರಂತೆ ನಿಪಿ.8 ರಂತೆ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ.

ನಿಪಿ.8 ರ ದಾಖಲೆಯಲ್ಲಿ ಮಲ್ಲೇಶಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಅವರ ಹೆಸರನ್ನು ಉದ್ದೇಶಪೂರ್ವಕವಾಗಿ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಅವರ ಹೆಸರನ್ನು ನೊಂದಾಯಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ಮಲ್ಲೇಶಪ್ಪರವರಾಗಿರುತ್ತಾರೆ ಎಂದರೆ ಸಾಕ್ಷಿಯು ಅವರ ಹೆಸರನ್ನು ಉದ್ದೇಶಪೂರ್ಕವಾಗಿ ನಿಪಿ.8 ರಲ್ಲಿ ಬೇರೆ ಶಾಹಿಯ ಇಂಕಿನಲ್ಲಿ ಬರೆದು ಇತ್ತಿಚೇಗೆ ಸೇರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.8 ರ ದಾಖಲೆಯ ಎರಡೂ ಬದಿಯಲ್ಲಿಯೂ ನಾಗಪ್ಪನವರ ಜಮೀನು ಪ್ರತ್ಯೇಕವಾಗಿ, ನಂಜುಂಡಪ್ಪನವರ ಜಮೀನು ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.8 ರ ಪಹಣಿಯಲ್ಲಿರುವ ನಾಗಪ್ಪ ಎಂದು ನಮೂದು ಇದ್ದು ಅವರು ನನ್ನ ತಂದೆಯವರಾಗಿರುವುದಿಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳು ಯಾರು ಜಮೀನನ್ನು ಸಾಗುವಳಿ ಮಾಡುತ್ತಿರುತ್ತಾರೋ ಅವರ ಹೆಸರನ್ನು ಪಹಣಿಯಲ್ಲಿ ನಮೂದಿಸುತ್ತಾರೆ ಎಂದರೆ, ಸಾಕ್ಷಿಯು ಹಣ ಪಡೆದು ಅವರಿಗೆ ಬೇಕಾದಂತೆ ನಮೂದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ಸಾಗುವಳಿ ಮಾಡುತ್ತಿರುವವರ ಹೆಸರು ಬದಲಾವಣೆ ಎಂದು ಏಕೆ ಕ್ರಮಕೈಗೊಂಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಗಮನಕ್ಕೆ ಬಂದ ತಕ್ಷಣ ನಾವು ಈ ದಾವೆಯಲ್ಲಿ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಮಧ್ಯಂತರ ಅರ್ಜಿ ಸಂ.1 ನಿಪಿ.8 ರ ದಾಖಲೆಯ ಮೇಲೆ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ.

ನಿಪಿ.9 ರ ಎಂ.ಆರ್.ನಲ್ಲಿ ನಮೂದಾಗಿರುವ ನಾಗಪ್ಪ ಬಿನ್ ಮೂಡ್ಲಪ್ಪನವರು ನನ್ನ ತಂದೆಯವರಾಗಿರುವುದಿಲ್ಲ. ನಿಪಿ.9 ರ ಎಂ.ಆರ್.ನಲ್ಲಿ ನಮೂದಾಗಿರುವ ನಾಗಪ್ಪ ಬಿನ್ ಮೂಡ್ಲಪ್ಪನವರು ನನ್ನ ಮುತ್ತಜ್ಜನ ಅಣ್ಣ–ತಮ್ಮಂದಿರು ಮತ್ತು ಅವರ ಮಕ್ಕಳಲ್ಲಿ ಬರುತ್ತಾರೆ. ನಿಪಿ.9 ರಲ್ಲಿ ದಾಖಲೆಯಲ್ಲಿ ನಮೂದಾಗಿರುವ ಆಸ್ತಿಗಳಲ್ಲಿ ನನ್ನ ಮುತ್ತಜ್ಜನ ಮಕ್ಕಳಿಗೂ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ, ಸಾಕ್ಷಿಯು ಅವರಲ್ಲಿ ಈಗಾಗಲೇ ಹಿಸ್ಸೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.9 ರ ದಾಖಲೆಯನ್ನು ಏಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ದೊಡ್ಡಪ್ಪನವರಾದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಒಟ್ಟು ಕುಟುಂಬದ ಆಸ್ತಿಗಳ ಖಾತೆ ಇರುತ್ತವೆ, ಅದರಲ್ಲಿ ನಮಗೂ ವಿಭಾಗ ಬರಬೇಕು. ಆದ್ದರಿಂದ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ.9 ರ ದಾಖಲೆಯಲ್ಲಿ ಸರ್ವೆ ನಂ.187/5 ರಲ್ಲಿ ನನ್ನ ತಂದೆ ನಾಗಪ್ಪ ಬಿನ್ ಮೂಡ್ಲಪ್ಪನವರಿಗೆ 1 ಎಕರೆ 10 ಗುಂಟೆ, ನಂಜುಂಡಪ್ಪ ಬಿನ್ ಮೂಡ್ಲಪ್ಪನವರಿಗೆ 25 ಗುಂಟೆ ಜಮೀನು ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾಗಪ್ಪ ಬಿನ್ ಮೂಡ್ಲಪ್ಪನವರು ನನ್ನ ತಂದೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.188/1 ಪಿ1 ರಲ್ಲಿ ನನ್ನ ತಂದೆ ನಾಗಪ್ಪ ಬಿನ್ ಮೂಡ್ಲಪ್ಪನವರಿಗೆ 28 ಗುಂಟೆ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾಗಪ್ಪ ಬಿನ್ ಮೂಡ್ಲಪ್ಪನವರು ನನ್ನ ತಂದೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ಬಿನ್ ಮೂಡ್ಲಪ್ಪನವರ ಜಮೀನುಗಳು ನಮಗೆ ಸೇರಿದವುಗಳಾಗಿರುವುದಿಲ್ಲ.

ನಿಪಿ.2 ರ ಕ್ರಯ ಪತ್ರದಂತೆ 4 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ನ್ನು 1 ರಿಂದ 3 ನೇ ಪ್ರತಿವಾದಿಗಳು ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ತಿಳಿಯದಂತೆ ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

ನನ್ನ ಮುತ್ತಜ್ಜನ ಹೆಸರು ಯಾಗಪ್ಪ. ನನ್ನ ಮುತ್ತಜ್ಜ ಯಾಗಪ್ಪನವರಿಗೆ 3 ಜನ ಮಕ್ಕಳು. ಅವರುಗಳೆಂದರೆ ಮೂಡ್ಲಪ್ಪ, ತಿಮ್ಮಪ್ಪ ಮತ್ತು ಸಿದ್ದಪ್ಪನವರಾಗಿರುತ್ತಾರೆ. ಸದರಿ ಮೂರು ಜನರು ಮರಣ ಹೊಂದುವ ಮೊದಲು ಹಿಂದು ಅವಿಭಕ್ತ ಕುಟುಂಬದ ಸದಸ್ಯರಾಗಿ ಮರಣ ಹೊಂದಿರುವುದಿಲ್ಲ. ಅವರುಗಳು ಮರಣ ಹೊಂದುವ ಪೂರ್ವದಲ್ಲಿಯೇ ವಿಭಾಗ ಮಾಡಿಕೊಂಡಿದ್ದರು. ತಿಮ್ಮಪ್ಪನವರಿಗೆ ಯಾವ ಆಸ್ತಿಗಳು ವಿಭಾಗಕ್ಕೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ನನಗೆ ನನ್ನ ಅಜ್ಜ ಮೂಡ್ಲಪ್ಪನವರಿಗೆ ಬಂದ ಹಿಸ್ಸೆಗಳ ಬಗ್ಗೆ ಮಾತ್ರ ತಿಳಿದಿರುತ್ತದೆ.

ನಮ್ಮ ಕುಟುಂಬದ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೆ ಹಿಸ್ಸೆಯ ಹಕ್ಕಿರುವುದಿಲ್ಲ ಏಕೆಂದರೆ ನಮ್ಮ ಕುಟುಂಬದ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ. 1 ನೇ ಪ್ರತಿವಾದಿ ಮತ್ತು ನನ್ನ ತಂದೆಯವರು ಒಟ್ಟಿಗೆ ಇದ್ದಾಗ, ನನ್ನ ತಂದೆ ಸರ್ಕಾರಿ ಕೆಲಸದಲ್ಲಿ ಇದ್ದು ಸದರಿ ಸಂಬಳದ ಹಣದಲ್ಲಿ ನಮ್ಮ ಕುಟುಂಬದ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಸರ್ಕಾರಿ ನೌಕರರಾಗಿದ್ದರಿಂದ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ Assets and liabilities ನಲ್ಲಿ ನಮೂದಿಸಿ ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಅವರ ಸ್ವಯಾರ್ಜಿತ

ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಸರ್ಕಾರದಿಂದ ಅನುಮತಿಯನ್ನು ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

4 ಮತ್ತು 5 ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ದಾವಾ ಐಟಂ ನಂ.1 ನ್ನು ನನ್ನ ಮುತ್ತಜ್ಜ ತಿಮ್ಮಪ್ಪನವರ ಹಿಸ್ಸೆಗೆ ಬಂದಿತ್ತು ಎಂದು ನಮೂದಿಸಿರುವ ಬಗ್ಗೆ ನನಗೆ ತಿಳಿದಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ನನ್ನ ಮುತ್ತಜ್ಜ ವೈ.ತಿಮ್ಮಪ್ಪನವರ ಹೆಸರಿಗೆ ಬಂದಿದ್ದು ಸದರಿ ಸ್ವತ್ತನ್ನು ಸದರಿ ತಿಮ್ಮಪ್ಪನವರು ಗವಿಸಿದ್ದಪ್ಪ ಬಿನ್ ಗವಿಯಣ್ಣನ ನಂಜಪ್ಪನವರಿಗೆ ದಿನಾಂಕ 21.05.1975 ರಲ್ಲಿ ಮಾರಾಟ ಮಾಡಿದ್ದು ನಂತರ ಸದರಿ ಗವಿಸಿದ್ದಪ್ಪನವರು ಅವರ ಸಹೋದರನ ಮಗನಾದ 4 ನೇ ಪ್ರತಿವಾದಿಯ ಹಿಸ್ಸೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ರೀತಿ ಹಿಸ್ಸೆಯನ್ನು ನೀಡಲು ತಿಮ್ಮಪ್ಪನವರಿಗೆ ಸದರಿ ಸ್ವತ್ತಿನ ಹಿಸ್ಸೆಯೇ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ತಿಮ್ಮಪ್ಪನವರಿಗೆ ದಾವಾ ಐಟಂ ನಂ.1 ರಲ್ಲಿ ಯಾವುದೇ ಹಿಸ್ಸೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ತಿಮ್ಮಪ್ಪನವರಿಗೆ ಯಾವುದೇ ಹಿಸ್ಸೆ ಬಂದಿರಲಿಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.